(ಇಂದು ದಿನಾಂಕಃ 07–01–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಸಿ ಬಿ ಕೆ ವಕೀಲರಿಂದ ಃ -

ನಾನು 12 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಆರಕ್ಷಕ ಇಲಾಖೆಯಲ್ಲಿ ಸಿವಿಲ್ ಮುಖ್ಯ ಪೇದೆಯಾಗಿ ನಿವೃತ್ತ ಹೊಂದಿರುತ್ತೇನೆ. ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ.

ನನ್ನ ಸಹೋದರರಾದ 1 ಮತ್ತು 3 ನೇ ವಾದಿಯರು ಗುತ್ತಿಗೆ ಕೆಲಸ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಸಾಕ್ಷಿ ಅವರು ಗುತ್ತಿಗೆದಾರರ ಬಳಿ ಕೂಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು ನನ್ನ ವಿವಾಹವು 1987 ರಲ್ಲಿ ಆದಾಗಿನಿಂದ ಸೇವೆಯ ಸಂಬಂದ ಅಮರಗೋಳದಲ್ಲಿ ನನ್ನ ಕುಟುಂಬಸ್ಥರ ಮನೆಯಲ್ಲಿ ವಾಸ ಮಾಡುತ್ತಾ ಬಂದಿರುತ್ತೇನೆ. 1 ಮತ್ತು 3 ನೇ ವಾದಿಯರು ಅಣ್ಣಿಗೇರಿಯಲ್ಲಿ ವಾಸವಿದ್ದರು.

ದಾವಾ ಆಸ್ತಿಗಳನ್ನು ಹೊರತು ಪಡಿಸಿ ನನ್ನ ಮನೆತನಕ್ಕೆ ಸೇರಿದ 04 ಎಕ್ರೆ 35 ಗುಂಟೆ ಜಮೀನು ಇರುತ್ತದೆ ಅದರ ಮೇಲೆ ವ್ಯಾಜ್ಯವು ಇದೇ ನ್ಯಾಯಾಲಯದಲ್ಲಿ ನಡೆಯುತ್ತಿದೆ. ನಾನು ಮತ್ತು ನನ್ನ ಸಹೋದರರು ಪ್ರತ್ಯಕವಾಗಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ.

ನನ್ನ ತಂದೆಯವರು 1963 ರಲ್ಲಿ ಮನೆ ಬಿಟ್ಟವರು ಇಲ್ಲಿಯವರೆಗೆ ಎಲ್ಲಿ ಹೋಗಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ ಸರಿ. ನಮ್ಮನ್ನು ನಮ್ಮ ತಂದೆಯ ತಂದೆಯಾದ ದಾವಾಲಸಾಬ್ ರವರೇ ನೋಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ದಾವಾಲಸಾಬ್ ರವರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ನನ್ನ ತಂದೆ ಒಬ್ಬ ಗಂಡು ಮಗ ಎಂದರೆ ಸರಿ. ದಾವಾಲಸಾಬ್ ರವರು ನಮ್ಮ ಬೆಳವಣಿಗೆಗೆ ಕೊಡಿಗೆ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿಯವರು ಮಾನಸಿಕವಾಗಿ ಅಸ್ವಸ್ಥರಿದ್ದರು ಎಂದು ನುಡಿಯುತ್ತಾರೆ. ದಾವಾಲಸಾಬ್ ರವರು ಮಾನಸಿಕವಾಗಿ ಅಸ್ವಸ್ಥರಿದ್ದ ಬಗ್ಗೆ ನನ್ನ ವಾದ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ ಆದರೆ ಸದರಿಯವರಿಗೆ ಓದು ಬರಹ ಬರುತ್ತಿರಲಿಲ್ಲ ಎಂದು ನಮೂದು ಮಾಡಿರುತ್ತೇನೆ. ದಾವಾಲಸಾಬ್ ರವರು 1982 ರಲ್ಲಿ ಮರಣ ಹೊಂದಿರುತ್ತಾರೆ. ಅವರ ಜೀವಿತ ಅವಧಿಯಲ್ಲಿ ಅವರು ನಮ್ಮನ್ನು ನೋಡಿಕೊಂಡು ಬಂದಿರುತ್ತಾರೆ ಎಂದರೆ ಸರಿ.

ದಿನಾಂಕ 25-04-1973 ರಲ್ಲಿ ದಾವಾಲಸಾಬ್ ರವರು ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1970 ರಲ್ಲಿ ದಾವಾಲಸಾಬ್ ರವರು ನಮಗೆ ಎಂದರೆ ವಾದಿಯರ ಹೆಸರಿನಲ್ಲಿ ಬಕ್ಷಿಸ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

1973 ರಲ್ಲಿ ವಾದಿಯರು ಮತ್ತು ಪ್ರತಿವಾದಿ ಅಲ್ಪವಯಿ ಇದ್ದರು ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ನೇ ವಾದಿಗೆ 1973 ರಲ್ಲಿ 18 ವರ್ಷ 01 ತಿಂಗಳು ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿ ನಮ್ಮ ಅಂದರೆ ವಾದಿಯರ ವಯಸ್ಸು ಅಲ್ಪವಯಿ ಇದೆ ಎಂದು ನಮೂದು ಆಗಿದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿದು ದಾವಾ ಆಸ್ತಿಯು 1970 ರಲ್ಲಿ ವಾದಿಯರಿಗೆ ದಾನವಾಗಿದ್ದು ಮಾರಾಟ ಮಾಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯು 25-04-1973 ರ ನೋಂದಾಯಿತ ದಾಖಲೆಯಾಗಿದ್ದು ಅದನ್ನು ನಿ.ಡಿ.**1** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಸದರಿ ದಾಖಲೆಯ 2 ನೇ ಪುಟದ ಪಕ್ಷಗಾರರ ವಯಸ್ಸನ್ನು ತೋರಿಸಲಾಗಿ ಸಾಕ್ಷಿಯ ಒಪ್ಪಿಕೊಂಡಿದ್ದು ಸದರಿ ದಾಖಲೆಯ ಭಾಗವನ್ನು ನಿ.ಡಿ.**1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನನ್ನ ಅಣ್ಣನಾದ ಹಸನಸಾಬ್ ರವರಿಗೆ 18 ವರ್ಷ ಆಗಿದ್ದು ಸದರಿ ದಾಖಲೆಯಲ್ಲಿ ಉದ್ದೇಶ ಪೂರಕವಾಗಿ ಆತನನ್ನು ಅಲ್ಪವಯಿ ಅಂತಾ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ.

ನಿಡಿ-1 ರಲ್ಲಿ ಆಸ್ತಿಯನ್ನು ಪ್ರತಿವಾದಿಯರ ಕಬ್ಜಾ ವಹಿವಾಟಿಗೆ ನೀಡಲಾಗಿರುತ್ತದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಶಾನಬೋಗ ರವರು ಬರೆದಿರುತ್ತಾರೆ ಆದರೆ ಸದರಿ ದಾಖಲೆಯ ಮೇಲೆ ದಾವಾಲಸಾಬ್ ರವರು ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾಲಸಾಬ್ ರವರಿಗೆ ಓದು ಬರಹ ಬರೆದೆ ಇದ್ದರು ಸದರಿಯವರು ನಿಡಿ-1 ಕ್ಕೆ ಸಹಿ ಮಾಡಿರುವುದಿಲ್ಲ ಎಂದು ನಿಡಿ-1 ಬರೆದ ಸಮಯದಲ್ಲಿ ತಿಳಿದು ಬಂದಿರುತ್ತದೆ. ದಾವಾಲಸಾಬ್ ರವರು ನಮ್ಮ ಅ.ಸಾ.ದಾ.ರ.ಕ ರಾಗಿ ನಿಡಿ-1 ರ ಮೇಲೆ ಎಡಹೆಬ್ಬಟ್ಟಿನ ಗುರುತನ್ನು ಹಾಕಿರುತ್ತಾರೆ ಅಂದರೆ ಸರಿಯಲ್ಲ. ನಿಡಿ-1 ನ್ನು ದಾವಾಲಸಾಬ್ ರವರು ನಮ್ಮ ಪರವಾಗಿ ಪ್ರತಿವಾದಿಯರಿಗೆ ನಿಡಿ-1 ರಂತೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ.

ದಾವಾ ಆಸ್ತಿಯು ಮಾರಾಟ ಆಗಿರುತ್ತದೆ ಎಂದು ನಮಗೆ ಗೊತ್ತಿಲ್ಲ. ನನಗೆ ಸಾಮಾನ್ಯ ಜ್ಞಾನ ಮತ್ತು ವ್ಯವಹಾರಿಕ ಜ್ಞಾನವಿರುತ್ತದೆ.

ಸಾಮಾನ್ಯವಾಗಿ ಆಸ್ತಿಗಳಲ್ಲಿ ಒಂದು ವ್ಯವಹಾರ ನಡೆದ ನಂತರ ಅದನ್ನು ಕಂದಾಯ ಇಲಾಖೆಯವರು ಎಂ ಆರ್ ಉತಾರನಲ್ಲಿ ನಮೂದು ಮಾಡಿ ಅದನಂತರ ಪಹನಿಗಳಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ.

1970 ರಲ್ಲಿ ಆದ ದಾನ ಪತ್ರದ ನಂತರದಲ್ಲಿ ಎಂ ಆರ್ ಉತಾರಗಳು ಆಗಿರುತ್ತವೆ ಆದರೆ ಅವು ನಮ್ಮ ತಾಯಿಯ ಬಳಿ ಇದ್ದು ಮಳೆ ಬಂದು ನಮ್ಮ ಮನೆಯು ಹಳೆಯದಾಗಿದ್ದು, ಕುಸಿದು ಬಿದ್ದು ದಾಖಲೆಗಳು ನಾಶಗೊಂಡಿರುತ್ತವೆ.

ಈ ಮೇಲೆ ಹೇಳಿದ ನಾಶಗೊಂಡ ದಾಖಲೆಗಳು ಕಂದಾಯ ಇಲಾಖೆ ರವರ ಬಳಿ ಇದ್ದು ಅದರ ದೃಡಿಕೃತ ಪ್ರತಿ ತೆಗೆದುಕೊಳ್ಳಲು ಅವಕಾಶ ಇರುತ್ತದೆ ಎಂದರೆ ಸಾಕ್ಷಿಯು ತಲೆ ಅಲ್ಲಾಡಿಸುತ್ತಾರೆ ಮುಂದುವರೆದು ಸಿಗಬಹುದು ಇಲ್ಲವಾದಲ್ಲಿ ಸಿಗದೇ ಇರಬಹುದು ಎಂದು ನುಡಿಯುತ್ತಾರೆ. ನಾನು ಹೇಳುತ್ತಿರುವ ದಾನ ಪತ್ರದ ಯಾವುದೇ ಎಂ ಆರ್ ನೋಂದಣಿ ಆಗಿರುವುದಿಲ್ಲ ಅಂದರೆ ಸರಿಯಲ್ಲ. ನೋಂದಣಿ ಆಗಿರುತ್ತದೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನಿಡಿ-1 ದಾಖಲೆ ಬರೆಯುವ ಸಮಯದಲ್ಲಿ ಪ್ರತಿವಾದಿಯು ಅಲ್ಪವಯಿ ಇದ್ದರು ಎಂದರೆ ಸರಿ. ನಿಡಿ-1 ರ ಆದಾರದ ಮೇಲೆ ನಿಪಿ-7 ಎಂ ಆರ್ ಉತಾರ ಆಗಿರುತ್ತದೆ ಎಂದರೆ ಸಾಕ್ಷಿಯು ಅದು ನಮ್ಮ ತಿಳುವಳಿಕೆಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

ನಿಪಿ-7 ರಂತೆ ಪ್ರತಿವಾದಿಯರ ಹೆಸರು ದಾವಾ ಆಸ್ತಿಯ ಮೇಲೆ 1973 ರಿಂದ ದಾಖಲಾಗಿರುತ್ತದೆ ಎಂದರೆ ಅವರು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ಕೈಬರಹದ ಪಹನಿ ಪತ್ರಿಕೆಯನ್ನು ತೋರಿಸಿ ಅದರಲ್ಲಿ ಪ್ರತಿವಾದಿಯ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಅವರು ಮಾಡಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯು ಸರ್ವೆ ಸಂಖ್ಯೆ 70 ರ ವಿಸ್ತೀರ್ಣ 07 ಎಕ್ರೆ 13 ಗುಂಟೆಯ ಕೈಬರಹದ ಪಹನಿ ಪತ್ರಿಕೆಯ ದೃಡಿಕೃತ ಪ್ರತಿಯಾಗಿದ್ದು ಅದನ್ನು ನಿ**.**ಡಿ**.2** ಎಂದು ಗುರುತಿಸಲಾಯಿತು.

1973 ರಿಂದ ಇಲ್ಲಿಯವರೆಗೆ ದಾವಾ ಆಸ್ತಿಗಳ ದಾಖಲೆಗಳಲ್ಲಿ ಪ್ರತಿವಾದಿಯರ ಹೆಸರು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಅವರು ಆಗ ಮಾಡಿಸಿಕೊಂಡಿದ್ದು ಇಲ್ಲಿಯವರೆಗೆ ಹಾಗೆ ನಡೆದುಕೊಂಡು ಬಂದಿರುತ್ತದೆ ಎಂದು ನುಡಿಯುತ್ತಾರೆ. ಪಹನಿ ಪತ್ರಿಕೆಗಳಲ್ಲಿ ನನ್ನ ಹೆಸರನ್ನು ದಾಖಲಿಸಲು ನಾನು ದಾವೆಯನ್ನು ಹೂಡಿರುತ್ತೇನೆ ಅದರ ಪೂರ್ವದಲ್ಲಿ ಪ್ರತಿವಾದಿಯ ಹೆಸರು ಆಸ್ತಿಗಳಲ್ಲಿ ಇದ್ದ ಬಗ್ಗೆ ನಮಗೆ ತಿಳುವಳಿಕೆ ಇರಲಿಲ್ಲ.

1973 ರಿಂದ ಪ್ರತಿವಾದಿಯು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಕಬ್ಜಾ ವಹಿವಾಟಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಕಬ್ಜಾ ವಹಿವಾಟಿನಲ್ಲಿ ಇದ್ದ ಬಗ್ಗೆ ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದ ಬಗ್ಗೆ ಕೇಳಲಾಗಿ ಸಾಕ್ಷಿಯು ಯಾವುದೇ ಸಂಮಜಸವಾದ ಉತ್ತರವನ್ನು ನೀಡುತ್ತಿಲ್ಲ.

ಸಾಮಾನ್ಯವಾಗಿ ಬ್ಯಾಂಕಗಳಲ್ಲಿ ಸಾಲವನ್ನು ಪಡೆಯಬೇಕಾದ್ದಲ್ಲಿ ಬ್ಯಾಂಕಿನವರು ಆಸ್ತಿಯ ದಾಖಲೆಯನ್ನು ಪರಿಶೀಲಿಸಿ ಸಾಲವನ್ನು ನೀಡುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಆಸ್ತಿಯು ಯಾರ ಕಬ್ಜೆಯಲ್ಲಿ ಇದೆ ಎಂದು ತೋರಿಸಲು ಸರ್ಕಾರದವರು ಒಂದು ಪ್ರಮಾಣ ಪತ್ರವನ್ನು ನೀಡುತ್ತಾರೆ ಎಂದರೆ ಸಾಕ್ಷಿಯು ದಾಖಲೆಗಳು ಯಾರ ಹೆಸರಿನಲ್ಲಿ ಇರುತ್ತದೆ ಅದರ ಪ್ರಕಾರ ನೀಡುತ್ತಾರೆ ಎಂದು ನುಡಿಯುತ್ತಾರೆ. ಸರ್ಕಾರದವರು ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿಯ ಕಬ್ಜೆದಾರರು ಎಂದು ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಯರು ತಮ್ಮ ಹೆಸರು ದಾಖಲೆಗಳಲ್ಲಿ ಇದ್ದ ಕಾರಣ ಎಲ್ಲಾ ಪ್ರಮಾಣ ಪತ್ರವನ್ನು ಪಡೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿಯು 1973 ರಿಂದ ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇದ್ದ ಕಾರಣ ಆತನು ಸದರಿ ದಾವಾ ಆಸ್ತಿಯ ಮೇಲೆ ಸಾಲವನ್ನು ಪಡೆದು ಅದರ ಅನುಬೋಗವನ್ನು ಮಾಡುತ್ತಾ ಬಂದಿದ್ದು ಸರ್ಕಾರದವರು ಆತನ ಹೆಸರಿನಲ್ಲಿ ದಾವಾ ಆಸ್ತಿಯ ಕಬ್ಜಾದಾರರು ಎಂದು ಪ್ರಮಾಣ ಪತ್ರವನ್ನು ಸಹ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ನಿಪಿ-20 ರ 11 ನೇ ಕಾಲಂನ್ನು ತೋರಿಸಿ ಅದರಲ್ಲಿ ಋಣಬಾರವಾಗಿರುತ್ತದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-20 ರಲ್ಲಿ ಪ್ರತಿವಾದಿಯು ಕಬ್ಜಾದಾರರು ಮತ್ತು ವಹಿವಾಟುದಾರರು ಎಂದು ನಮೂದು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಷಯವು ತಿಳಿದಿದ್ದರು ಸಹ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಮತ್ತು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಮಾಹಿತಿಯ ಮೇರೆಗೆ ದಾವೆಯನ್ನು ಸಲ್ಲಿಸಿ ನ್ಯಾಯಾಲಯದ ಎದುರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ದಾವಾ ಆಸ್ತಿಯ ಬಗ್ಗೆ ಕರವನ್ನು ತುಂಬಿದ ಬಗ್ಗೆ ನನ್ನ ತಾಯಿಯವರೆಗೆ ಮಾಹಿತಿ ಇರುತ್ತದೆ. ಆಸ್ತಿಗಳ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಮಾನ್ಯವಾಗಿ ಆಸ್ತಿಗಳ ತೆರಿಗೆಯನ್ನು ಮಾಲಕರು ಸರ್ಕಾರಕ್ಕೆ ಪಾವತಿ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿಯು

ಮುಂದುವರೆದು ನಮ್ಮ ಆಸ್ತಿಯ ಬಗ್ಗೆ ನಾನು ತಲೆ ಕೆಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ದಾವಾಲಸಾಬ್ ರವರು ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿದ ಕಾರಣ ಅದು ನಮಗೆ ಗೊತ್ತಿದ್ದ ಕಾರಣ ನಾವು ಅದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

ಪ್ರತಿವಾದಿಯು ದಾವಾ ಆಸ್ತಿಯ ಸಂಬಂದ ತೆರಿಗೆಯನ್ನು ಪಾವತಿಸುತ್ತಾ ಬಂದಿರುತ್ತಾನೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯು ನಮ್ಮ ಹೆಸರಿನಲ್ಲಿ ಇಲ್ಲದೇ ಇದ್ದ ಕಾರಣ ಮತ್ತು ನಾವು ಮಾಲಕರು ಅಲ್ಲದೇ ಇದ್ದ ಕಾರಣ ತೆರಿಗೆ ಪಾವತಿಸುವ ಪ್ರಶ್ನೆ ಬರುವುದಿಲ್ಲ ಅದಕಾರಣ ನಾವು ಅದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

ಬೆಳೆ ವಿಮೆಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಬೆಳೆಯನ್ನು ಬೆಳೆದು ಅದರ ಮೇಲೆ ಬೆಳೆ ವಿಮೆಯನ್ನು ಪಡೆದುಕೊಂಡಿರುತ್ತಾನೆ ಎಂದರೆ ಸಾಕ್ಷಿಯು ದಾಖಲೆಗಳು ನಮ್ಮ ತಾಯಿಯ ಬಳಿ ಇದ್ದು ಮಳೆಯ ಕಾರಣ ಮನೆ ಕುಸಿದು ಬಿದ್ದು ನಾಶಗೊಂಡಿರುತ್ತವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಾನು ಬೆಳೆ ಬೆಳೆಸುವ ಅಥವಾ ವಿಮೆಯನ್ನು ಪಡೆಯುವ ಬಗ್ಗೆ ಕೇಳಲಾಗಿ ಸಾಕ್ಷಿಯು ಅದು ನಮ್ಮ ತಾಯಿಯವರಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಎಲ್ಲಾ ವಿಷಯ ತಿಳಿದಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**